# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 643 |
| ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ |
| ಉತ್ತರಿಸಬೇಕಾದ ದಿನಾಂಕ | : | 22.02.2022 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಪೌರಕಾರ್ಮಿಕರ ಸಂಖ್ಯೆ ಎಷ್ಟು; | ಪ್ರಸ್ತುತ ಮೈಸೂರು ಮಹಾನಗರಪಾಲಿಕೆಯಲ್ಲಿ 540 ಖಾಯಂ ಪೌರಕಾರ್ಮಿಕರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. |
| ಆ) | ಅವರಿಗೆ ನೀಡಲಾಗುತ್ತಿರುವ ತಲಾ ಮಾಸಿಕ ವೇತನವೆಷ್ಟು; | ಮೈಸೂರು ಮಹಾನಗರ ಪಾಲಿಕೆಯ 540 ಖಾಯಂ ಪೌರಕಾರ್ಮಿಕರಿಗೆ ಅವರ ವೇತನ ಶ್ರೇಣಿಗೆ ಅನುಗುಣವಾಗಿ ರೂ.17000-28950ಗಳನ್ನು ಖಾತೆಗೆ ಜಮಾ ಮಾಡಲಾಗುತ್ತಿದೆ. |
| ಇ) | ಗುತ್ತಿಗೆ ಆಧಾರದ ಮೇಲೆ / ದಿನಗೂಲಿ / ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಸಂಖ್ಯೆ ಎಷ್ಟು ಹಾಗೂ ಅವರಿಗೆ ನೀಡಲಾಗುತ್ತಿರುವ ತಲಾ ಮಾಸಿಕ ವೇತನವೆಷ್ಟು; | ಪ್ರಸ್ತುತ ನೇರ ಪಾವತಿಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕ ಸಂಖ್ಯೆ:1609.<br><br>ಪಾಲಿಕೆಯಲ್ಲಿ ಸ್ವಚ್ಛತಾ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಪೌರಕಾರ್ಮಿಕರ ಪದ್ಧತಿಯನ್ನು ರದ್ದುಪಡಿಸಿ, ಪ್ರಸ್ತುತ ನೇರ ಪಾವತಿಯಡಿ ಕಾರ್ಮಿಕ ಇಲಾಖೆಯು ನಿಗಧಿಪಡಿಸ್ಸಿರುವ ಮೂಲ ವೇತನ + VDA ಸೇರಿ ರೂ. 15,121.20 + ಇಎಸ್ಐ 3.25 % + ಪಿಎಫ್ 13.00% ಮೊತ್ತವನ್ನು ಸೇರಿ ಮಾಸಿಕ ವೇತನವನ್ನು ಪಾಲಿಕೆ ವತಿಯಿಂದ ಪೌರಕಾರ್ಮಿಕರ ಖಾತೆಗೆ ಜಮಾ ಮಾಡಲಾಗುತ್ತಿದೆ. |
| ಈ) | ಸದರಿಯವರ ವೇತನವನ್ನು ಯಾವಾಗ ಪರಿಷ್ಕರಣೆ ಮಾಡಲಾಯಿತು.; | ಕಾರ್ಮಿಕ ಇಲಾಖೆಯು ಕಾಲ ಕಾಲಕ್ಕೆ ನಿಗಧಿಪಡಿಸುವ ವೇತನವನ್ನು ನೀಡಲಾಗುತ್ತಿದೆ. |
| ಉ) | ಪೌರಕಾರ್ಮಿಕರಿಗೆ ಕೊರತೆ ಇರುವ ಮೂಲಭೂತ ಸೌಲಭ್ಯಗಳೇನು; (ವಿವರಗಳನ್ನು ಒದಗಿಸುವುದು) | ಮೈಸೂರು ಮಹಾನಗರ ಪಾಲಿಕೆಯಲ್ಲಿ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಯಾವುದೇ ರೀತಿಯ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ವರದಿಯಾಗಿರುವುದಿಲ್ಲ. |
| ಊ) | ಪೌರಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಯಾವ ವಿಶೇಷ ಸವಲತ್ತುಗಳನ್ನು ನೀಡಲಾಗಿದೆ? | ಮೈಸೂರು ಮಹಾನಗರ ಪಾಲಿಕೆಯ ವತಿಯಿಂದ ಪೌರಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ ಈ ಕೆಳಕಂಡಂತೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ.<br>• ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವ ಪೋಷಕರ ಮಕ್ಕಳಿಗೆ ಸಮಾಜಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ 1 ರಿಂದ 10 ನೇ ತರಗತಿಯವರೆಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಸೌಲಭ್ಯ ಕಲ್ಪಿಸಲು ಕ್ರಮವಹಿಸಲಾಗುತ್ತಿದೆ.<br>• ಎಸ್.ಎಫ್.ಸಿ. ಮುಕ್ತನಿಧಿ ಹಾಗೂ ನಗರ ಸ್ಥಳೀಯ |

| | | |
|---|---|---|
| | | ಸಂಸ್ಥೆಯ ನಿಧಿಯ ಶೇ.24.10% ಪರಿಶಿಷ್ಟ ಜಾತಿ/ಪಂಗಡದ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಕಲ್ಯಾಣ ಕಾರ್ಯಕ್ರಮದಡಿ ಪೌರಕಾರ್ಮಿಕರ ಮಕ್ಕಳಿಗೆ ಪ್ರಥಮ ಆದ್ಯತೆಯನ್ನು ನೀಡಿ ವಿವಿಧ ಹಂತಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಈ ಕೆಳಕಂಡಂತೆ ನೀಡಲಾಗುತ್ತಿದೆ. |

| ತರಗತಿ | ಪ್ರತಿ ವಿದ್ಯಾರ್ಥಿಗೆ ನೀಡುವ ವಿದ್ಯಾರ್ಥಿ ವೇತನ (ರೂ.ಗಳಲ್ಲಿ) |
|---|---|
| ಎಸ್.ಎಸ್.ಎಲ್.ಸಿ. | 3,000/- |
| ಪಿ.ಯು.ಸಿ. ಐ.ಟಿ.ಐ., ಡಿಪ್ಲೋಮೋ ಇತರೆ ವೃತ್ತಿಪರ ತರಬೇತಿ, ಪ್ಯಾರ ಮೆಡಿಕಲ್ ಕೋರ್ಸ್/ಡಿ.ಇಡಿ/ ಸಿ.ಪಿ.ಇಡಿ ಇತರೆ ತಾಂತ್ರಿಕ ತರಗತಿಗಳಿಗೆ | 4,500/- |
| ಬಿ.ಎ, ಬಿ.ಎಸ್ಸಿ. ಬಿಕಾಂ. ಬಿಬಿಎಂ, ಬಿಸಿಎ ಬಿ.ಇಡಿ. / ಬಿ.ಪಿಇಡಿ ಇತರೆ ಪದವಿ | 6,000/- |
| ಎಂ.ಇಡಿ / ಎಂಪಿಇಡಿ | 9,000/- |
| ಎಂ.ಎ. ಎಂ.ಎಸ್ಸಿ. ಎಂ.ಕಾಂ., ಎಂ.ಎಸ್.ಡಬ್ಲ್ಯೂ, ಎಂ.ಸಿಎ. | 15,000/- |
| ಇತರೆ ಇನ್ನಾವುದೇ ಸ್ನಾತಕೋತ್ತರ ಪದವಿ | 10,000/- |
| ಬಿ.ಇ., ಎಂ.ಬಿ.ಬಿ.ಎಸ್., ಬಿ.ಡಿ.ಎಸ್. ಎಂ.ಟೆಕ್, ಎಂ.ಎಸ್. ಎಂ.ಡಿ. ಎಂ.ಇ | 25,000/- |
| ಪಿ.ಹೆಚ್‌ಡಿ., ಪೋಸ್ಟ್ ಡಾಕ್ಟರೇಟ್ | 30,000/- |

- ಪೌರಕಾರ್ಮಿಕರ ಕುಟುಂಬದವರು ಬಿ.ಇ & ಎಂ.ಬಿ.ಬಿ.ಎಸ್ ವಿದ್ಯಾರ್ಥಿಗಳಾಗಿದ್ದಲ್ಲಿ ಲ್ಯಾಪ್‌ಟಾಪ್ ನೀಡಲಾಗುತ್ತಿದೆ.
- ಪೌರಕಾರ್ಮಿಕರ ಕುಟುಂಬದವರು ಎಲ್.ಎಲ್.ಬಿ ಪದವೀಧರರಾಗಿದ್ದಲ್ಲಿ ಕಾನೂನು ಪುಸ್ತಕಗಳನ್ನು ರೂ. 20,000/-ಕ್ಕೆ ಖರೀದಿಸಿ ನೀಡಲಾಗುತ್ತಿದೆ.
- ಪೌರಕಾರ್ಮಿಕರ ಮಕ್ಕಳಿಗೆ ಉಚಿತವಾಗಿ COMPUTER AND SPOKEN ENGLISH TRAINING ತರಬೇತಿ ನೀಡಲಾಗುತ್ತಿದೆ.
- ಪೌರಕಾರ್ಮಿಕ ಮಕ್ಕಳ ಶಿಕ್ಷಣ ಹಾಗೂ ಉನ್ನತ ವ್ಯಾಸಂಗಕ್ಕೆ ಶಾಲಾ ಶುಲ್ಕವನ್ನು ಮರು ಪಾವತಿ ಮಾಡಲಾಗುತ್ತಿದೆ.
- ಹೆಚ್ಚು ಅಂಕಗಳಿಸಿದ ಪೌರಕಾರ್ಮಿಕ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.

ನಅಇ 20 ಎಸಿಎಂ 2022 (ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು
**(ಬಿ.ಎ. ಬಸವರಾಜ)**
**ನಗರಾಭಿವೃದ್ಧಿ ಸಚಿವರು**